

# ಈ ಗಾಯಗಳಿಗೆಲ್ಲಿದೆ ಮುಲಾಮು?

**ದೂರದಲ್ಲೆಲ್ಲೋ ಕೇಳಿಸುವ ಪರಿಸರದ ಆರ್ತನಾದಕ್ಕೆ ನಮ್ಮ ಕಿವಿ ಕಿವುಡಾಗಬಹುದು. ಆದರೆ, ನಮ್ಮ ಸುತ್ತಮುತ್ತಲಿನ ಪರಿಸರವನ್ನು ನಾವೇ ಗಾಯಗೊಳಿಸಿದ್ದೇವಲ್ಲ...**

■ ವಿ.ಆರ್.

ಪೇರಿಸಿಟ್ಟ ಕಡ್ಡಿಗಳ ರಾಶಿಗಳಂತೆ ಕಾಣಿಸುವ ಈ ಛಾಯಾಚಿತ್ರ ಅರ್ಜೆಂಟೀನಾದ ಗ್ರ್ಯಾನ್ ಚಾಕೊ ಪ್ರಾಂತ್ಯಕ್ಕೆ ಸಂಬಂಧಿಸಿದ್ದು. ಮೇಲ್ನೋಟಕ್ಕೆ ಈ ಚಿತ್ರ ಯಾವುದೋ ಕಲಾವಿದನ ಕ್ಯಾಮೆರಾದಲ್ಲಿ ಅರಳಿದ ಕಲಾಕೃತಿಯಂತೆ ಕಾಣಿಸುತ್ತದೆ. ಹಾಗೆಂದು ಭಾವಿಸಿದರೂ ಅಡ್ಡಿಯಿಲ್ಲ. ಆದರೆ, ಈ ಕಲಾಕೃತಿ ಹುಟ್ಟಿಸುವುದು ಮಧುರ ಅನುಭೂತಿಯನ್ನಲ್ಲ, ಗಾಢ ವಿಷಾದವನ್ನು.

ಮರದ ಸಂಸ್ಕರಣೆ ಕಾರ್ಖಾನೆಯಲ್ಲಿ ಒಟ್ಟಲಾದ ಮರಮುಟ್ಟುಗಳ ಈ ಚಿತ್ರ ಏನನ್ನು ಸೂಚಿಸುತ್ತದೆ. ಗಮನಿಸಿ ನೋಡಿ: ಗಾಢ ಹಸಿರು ಹಾಸಿನ ಮೇಲೆ ಪೇರಿಸಲಾದ ಮರದ ಕೊರಡುಗಳು ಏನೆಲ್ಲ ಕಥೆ ಹೇಳುತ್ತಿರಬಹುದು? ಈ ಕೊರಡುಗಳ ಹಿಂದೆ ಅದೆಷ್ಟು ಹಸಿರು ನಾಶವಾಗಿರಬಹುದು? ಅದೆಷ್ಟು ಪಶುಪಕ್ಷಿಗಳ ಆಹಾರ ಕಳೆದುಹೋಗಿರಬಹುದು? ಮರಗಳು ಕರುಣಿಸುವ ನೆರಳು ಮತ್ತು ಆಮ್ಲಜನಕಕ್ಕೆ ಬೆಲೆ ಕಟ್ಟುವುದಾದರೂ ಹೇಗೆ?

ದುರಂತ ನೋಡಿ. ಅರಣ್ಯವನ್ನು ಸವರುವ ಕೆಲಸ ವಿಶ್ವದೆಲ್ಲೆಡೆ ಎಗ್ಗಿಲ್ಲದೆ ನಡೆಯುತ್ತಿದೆ. ಅದಕ್ಕೆ ಅರ್ಜೆಂಟೀನಾ ಹೊರತೇನೂ ಅಲ್ಲ. ಗ್ರ್ಯಾನ್ ಚಾಕೊ ಪರಿಸರ ವಿಶ್ವದ ಅತ್ಯಂತ ವಿಶಿಷ್ಟ ಪರಿಸರ ವಲಯಗಳಲ್ಲೊಂದು. ವಿರಳ ಜನಸಂಖ್ಯೆಯ ಈ ಪ್ರದೇಶ, ನಿಬಿಡ ಕಾಡುಗಳಿಂದಾಗಿ ಪ್ರಸಿದ್ಧ. ಆದರೆ, ವರ್ಷದಿಂದ ವರ್ಷಕ್ಕೆ ಕಾಡಿನ ಸವಕಳಿ ಅವಿರತವಾಗಿ ನಡೆಯುತ್ತಲೇ ಇದೆ. ದೃಷ್ಟಿ ಹಾಯಿಸಿದಲ್ಲೆಲ್ಲ ಕಾಣಿಸುವ ಸೂರ್ಯಕಾಂತಿ ಹೊಲಗಳು, ಸೋಯಾ ಬೀನ್‌ಗಳ ಬೆಳೆಯ ಪ್ರದೇಶದ ಜಾಗದಲ್ಲಿ ಕಣ್ಮರೆಯಾದ ಕಾಡನ್ನು ಕಲ್ಪಿಸಿಕೊಳ್ಳಬೇಕು. ಜಾನುವಾರುಗಳಿಗೆ ಆಹಾರ ಹೊಂಚುವ ನೆಪ ಕೂಡ ಹಸಿರುಮೇಧಕ್ಕೆ ಕಾರಣವಾಗಿದೆ. ಅರಣ್ಯನಾಶದಿಂದಾಗಿ ದಕ್ಷಿಣ ಅಮೆರಿಕದ ಎರಡನೇ ಬಹು ದೊಡ್ಡ ಪರಿಸರ ಜಾಲವೊಂದು ತನ್ನ ಚಹರೆ ಕಳೆದುಕೊಳ್ಳುವಂತಾಗಿದೆ.

ಈ ಟಿಪ್ಪಣಿಯೊಂದಿಗಿನ ಛಾಯಾಚಿತ್ರವನ್ನು ಮತ್ತೊಮ್ಮೆ ನೋಡಿ. ಛಾಯಾಚಿತ್ರದಲ್ಲಿನ, ಹಸಿರು ಸವರಿಸಿಕೊಂಡು ಶವಗಳಂತೆ ಮಲಗಿರುವ ದಿಮ್ಮಿಗಳು ಕಾಡಿನ ದೇಹದ ಮೇಲಾದ ಗಾಯಗಳಂತೆ ಕಾಣಿಸುತ್ತವೆ. ಈ ಗಾಯಗಳಿಗೆ ಮುಲಾಮು ಹಚ್ಚುವವರು ಯಾರು? ಅಂದಹಾಗೆ, ಈ ಗಾಯಗಳು ದೂರ ದೇಶದ ದುರಂತದ ಬಿಂಬಗಳೆಂದು ಭಾವಿಸಿ ನಿರಾಳವಾಗುವಂತಿಲ್ಲ. ಇಂಥ ಚಿತ್ರಗಳು ನಮ್ಮ ಸುತ್ತಮುತ್ತಲೂ ಇವೆ. ನಮ್ಮ ಬಾಲ್ಯದಲ್ಲಿನ ಹಸಿರುಸಿರಿ ಈಗ ಮೂಲರೂಪದಲ್ಲಿ ಉಳಿದಿದೆಯೆ? ಅಕ್ಷಯಪಾತ್ರೆಗಳಂಥ ಬೆಟ್ಟಗುಡ್ಡಗಳು ಕಣ್ಣಮುಂದೆಯೇ ಕರಗಿಹೋದುದಕ್ಕೆ, ಕರಗಿಹೋಗುತ್ತಿರುವುದಕ್ಕೆ ನಮ್ಮ ಕಣ್ಣುಗಳೇ ಸಾಕ್ಷಿಯಾಗಿವೆಯಲ್ಲ! ಅಷ್ಟು ಮಾತ್ರವಲ್ಲ, ‘ದೇವರ ವರ’ದಂಥ ಪಶ್ಚಿಮ ಘಟ್ಟ ಪರಿಸರವನ್ನು ನಾವೆಷ್ಟು ಜತನದಿಂದ ಉಳಿಸಿಕೊಂಡಿದ್ದೇವೆ. ಪರಿಸರದ ಗಾಯಗಳನ್ನು ಮತ್ತಷ್ಟು ಕೆರೆಯುವುದರಲ್ಲಿ ನಮ್ಮೆಲ್ಲರ ಪಾಲೂ ಇದೆಯಲ್ಲವೇ?

ಇದು ಆತ್ಮಾವಲೋಕನದ ಸಮಯ. ■